ವಾರದ ಸಂಚಿಕೆ

Reg No. M 1299
Daily & Weekly

For All Kinds of
Printing & Binding
The
Satyavadi
Press

SATYAVADI—Oldest Newspaper of Mysore

ಸತ್ಯವಾದಿ

ಸಂಪುಟ 26 ಸಂಚಿಕೆ 307 | ಶನಿವಾರ 5—6—1943 | 6 ಪೈ

Opera — Aryamala

ಅಪೆರಾ——

4 ನೇ ಅಮೋಘ ವಾರ

ಆರ್ಯಮಾಲ

ಪಿ. ಯು. ಚಿನ್ನಪ್ಪ ಸಂತಾನಲಕ್ಷ್ಮಿ, ಶಕುಂತಲ. ಕೃಷ್ಣ, ಮಧುರಂ ಮುಂತಾದವರು ಪಾತ್ರವಹಿಸಿರುವರು

ವರ್ತಮಾನ ಸಂಗ್ರಹ

—೦—

ಇಟಲಿ ಸರ್ಕಾರವು ನೌಕೆಯ ಮುಖ್ಯ ಸ್ಥರನ್ನು ಒದಲತಾಯಿಸಿ ಜನರಲ್ ರೋಸಿಲ್‌ವರಿಗೆ ಕೊಟ್ಟಿದೆ. ಡೇಲಿನೋಲ್ ಪತ್ರಿಕೆಯು ಜಿಬ್ರಾಲ್ಟರ್‌ನಲ್ಲಿ ವಿಶ್ವಪಕ್ಷಗಳ ನೌಕೆಯು ಮಿತಿಮೀರಿ ಸೇರಿದೆ, ವಾಪಾರದ ಹಡಗು 140 ಕ್ಕೆ ಹೆಚ್ಚಿದೆ ಎಂದು ಬರೆದಿದೆ. ಅಲ್ಲದೆ ಯಾವಾಗ ಎಲ್ಲಿ ಯುದ್ಧ ಹೂಡುವುದೆಂದು ಶತ್ರುಗಳು ಹೆದರಿರುವುದು.

೦ ೦

ಇದುವರೆಗೆ ಫ್ರೆಂಚ್ ಕೂಲಿಗಾರರು 250 ಸಾವಿರ ಜರ್ಮನಿಯಲ್ಲಿ ಕೆಲಸ ಮಾಡುತ್ತಿರುವರು.

೦ ೦

ಭಾರತಕ್ಕೆ ಸಾಲ 1936 ರಲ್ಲಿ 360 ಮಿಲಿಯನ್ ಪೌಂಡ್ ಇತ್ತೆಂದೂ ಈಗ 12 ಮಿಲಿಯನ ಪೌಂಡ್ ಮಾತ್ರವೆಂದೂ ನಾಳೆ ಭಾರತವು ಸಾಲದ ಬದಲು ನಾವೇ ಋಣಿಗಳಾಗುವೆವೆಂದೂ ಇಷ್ಟೆಲ್ಲಾ ಯುದ್ಧ ಸಾಮಗ್ರಿಯನ್ನು ಭಾರತ ಒದಗಿಸುತ್ತಿರುವುದೇ ಕಾರಣವೆಂದೂ ಲಂಡನ್ ಪತ್ರಿಕೆಯೊಂದು ತಿಳಿಸುತ್ತದೆ.

೦ ೦

ಮಿ|| ಸ್ಟಾಲಿಯರ್ ಮಿ|| ಚರ್ಚಿಲ್ಲರ ಭೇಟಿ ಕೈರೋನಲ್ಲಿ ನಡೆಯುವುದೆಂದು ಊಹಿಸಲಾಗಿದೆ.

೦ ೦

ಮಿಲ್ಲನ್‌ಬೇ, ಪೋರ್ಟ್‌ಮೋರ್‌ಸ್ಬಿ ಯಲ್ಲಿ ಹಿಂದೆ ಜಪಾನಿಯರು 250 ಪೌಂಡಿನ ಬಾಂಬನ್ನು ಉಪಯೋಗಿಸಿದ್ದರು. ಅದು ಟೈಮ್ ಬಾಂಬ್ ಭೂಮಿಗೆ 100 ಅಡಿಗೆ ಬಂದಾಗ ಹಾಕಿತಕ್ಕದ್ದಾಗಿತ್ತು. ಈಗ ಹಿಂದಿನ ತಿಂಗಳು ಮಿತ್ರಪಕ್ಷದವರು ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳಲು 2000 ಪೌಂಡ್ ಬಾಂಬನ್ನು ಹಾಕಿದರು. ಅದು ಭೂಮಿಗೆ 50 ರಿಂದ 300 ಅಡಿಯಲ್ಲಿಗೆ ಬಂದಾಗ ಹಾರುವ ತ್ರಾಣವಿದ್ದಿತು.

ಫೆಡರಲ್ ಕೋರ್ಟ್

ತೀರ್ಮಾನ

ಕಲ್ಕತ್ತಾ ಹೈಕೋರ್ಟ್ ಆರ್ಡಿನೆನ್ಸ್ ತೀರ್ಮಾನದ ಮೇಲೆ, ಬಂಗಾಳಾ ಸರಕಾರದವರು ಫೆಡರಲ್ ಕೋರ್ಟಿಗೆ ಅಪೀಲು ಮಾಡಿದ್ದರಷ್ಟೆ. ಕಳೆದ ಶುಕ್ರವಾರ ಫೆಡರಲ್ ಕೋರ್ಟ್ ಚೀಫ್ ಜಸ್ಟಿಸ್ ಸರ್ ಎಸ್. ವರದಾಚಾರ್ ಮತ್ತು ಇನ್ನೊಬ್ಬರು ಸರ್ ಜಫರುಲ್ಲಾರವರು ಸರಕಾರಿ ಅರ್ಜಿಯನ್ನು ವಜಾ ಮಾಡಿದರು; ಮೂರನೇ ಜಡ್ಜಿ ರೋಲಾಂಡರು ಈ ಇಬ್ಬರ ತೀರ್ಪನ್ನು ಒಪ್ಪಲಿಲ್ಲ. ಈಗ ಬಂಗಾಳಾ ಸರಕಾರದವರು ಲಂಡನ್ನಿನಲ್ಲಿರುವ ಪ್ರಿವಿ ಕೌನ್ಸಿಲ್ಲಿಗೆ ಅಪೀಲು ಮಾಡುವರು. ಈ ತೀರ್ಮಾನದಿಂದ ಭಾರತದ ಅನೇಕ ಕೇಸುಗಳು ಇದೇ ರೀತಿ ತೀರ್ಮಾನವಾಗಬೇಕು.

ಜಪಾನರ ಹಿಂದೋಟ

ಚೈನಾದಲ್ಲಿ ಇಚಾಂಗ್ ಬಳಿ ಚೀನೀಯರು ಜಪಾನಿಗಳನ್ನು ಸದೆಬಡಿದು 6 ದಿವಸಗಳಲ್ಲಿ 40 ಮೈಲಿಗಳು ನುಗ್ಗಿ ಚಾಂಗ್‌ಯಾಂಗ್, ಚಿಕಾಂಗ್ ಪಟ್ಟಣಗಳನ್ನು ಹಿಡಿದಿರುತ್ತಾರೆ.

ಅಮೇರಿಕಾ ಮುಷ್ಕರ.

ಅಮೇರಿಕಾದ ಪೈಸಿಡೆಂಡ್ ಮಿ|| ರೂಬವೆಲ್ಟರು ಕಲ್ಲಿದ್ದಲು ಕೂಲಿಗಾರರು ಕೂಡಲೆ ಕೆಲಸಕ್ಕೆ ಬರಬೇಕೆಂದೂ ಇವರ ಮಕ್ಕಳು, ಸಹೋದರರು ಯುದ್ಧಸೇವೆ ಮಾಡುವಂತೆ ತಾವು ಯುದ್ಧದಲ್ಲಿ ಭಾಗಿಯಾಗಬೇಕೆಂದು ಕೇಳಿಕೊಂಡಿರುತ್ತಾರೆ. ಮುಷ್ಕರಕ್ಕೆ ಪದಾರ್ಥಗಳ ಬೆಲೆ ಏರುತ್ತಿರುವುದೇ ಕಾರಣವಂತೆ. ರೋಲ್ಸ್‌ರೈಸ್, ಪ್ಯಾಕರ್ಡ್ ಮೋಟಾರ್ ಕಂಪನಿಯಲ್ಲೂ ಮುಷ್ಕರ ನಡೆದು ರಾತ್ರಿಪೊತ್ತಿಗೆ ಕೆಲಸಕ್ಕೆ ಪುನಹ ಬಂದರು.

ಊರೆ ಬಿಟ್ಟರು

ಇಟಲಿಯ ಜನರು ಕ್ಯಾಂಗ್‌ಲಿಯಾರಿಯನ್ನು ಪೂರ್ತಿಯಾಗಿ ತ್ಯಜಿಸಿ ಇತರ ಕಡೆಗಳಿಗೆ ಹೋದರು.

ವಿಶೇಷ ವರ್ತಮಾನ

ಬಿಹಾರಿನಲ್ಲಿ ಮಂತ್ರಿಮಂಡಲ ರಚನೆ ವಿಜಯದಲ್ಲಿ ಮಾಜಿ ಅಡ್ವೋಕೇಟ್ ಜನರಲ್‌ರಾಗಿದ್ದ ಮಿ|| ಜಾಲದೇವ ಸಾಹೇಬರವರು ಕಾಂಗ್ರೆಸ್‌ಸಮರದಲ್ಲಿ ಅನೇಕರು ಜೈಲಿನಲ್ಲಿರುವಾಗ ರಚನಾತ್ಮಕ ಸಡಿಸವ್ವದು ತಪ್ಪೆಂದು ಹೇಳುತ್ತಾರೆ.

ಯಾವಾಗ, ಎಲ್ಲಿ ಇಟಲಿಗೆ ಮುತ್ತಿಗೆ ಹಾಕುವರೋ ಎಂದು ಮುಸಲೋನಿಗೆ ಭಯವಾಗಿದೆ ಇದಕ್ಕಾಗಿ ಹೆಚ್ಚಿನ ಸೇನೆಗಳನ್ನು ಜಮಾಯಿಸಿ ಕೊಳ್ಳುತ್ತಿರುವುದು. ಪಂಟೆಲೇರಿಯಾ ದ್ವೀಪವನ್ನು ವಿಮಾನಗಳೂ ನೌಕೆಗಳೂ ಎಡಬಿಡದೆ ಧಾಳಿ ಮಾಡುತ್ತಿವೆ ಇನ್ನೇನು ಇದು ಶತ್ರುಗಳ ಕೈತಪ್ಪುವ ಸ್ಥಿತಿಯಲ್ಲಿದೆ.

ರಷ್ಯಾದ ಕ್ರಿಮಿಯಾನಲ್ಲಿ ರಷ್ಯನರ ಕೈಮೇಲಾಗಿದೆ. ಕ್ಯೂವ್ ಮೇಲೆ ರಷ್ಯಾವು ಧಾಳಿ ಮಾಡುತ್ತಿದೆ. ಕಲಿಸಿನ್ ಪ್ರಾಂತ್ಯದಲ್ಲಿ ಜರ್ಮನ್ ನುಗ್ಗುನಿಕೆಯನ್ನು ರಷ್ಯನರು ತಳ್ಳಿಹಾಕಿದರು. ಇಲ್ಲಿ 2000 ಜರ್ಮನಿಯರು ಹತರಾದರು.

ನಾಜಿಗಳು ಎಷ್ಟು ಸಿದ್ಧತೆ ಮಾಡಿಕೊಂಡು ನಮ್ಮ ಮೇಲೆ ಬಿದ್ದರೂ ಅವರನ್ನು ಹಿಮ್ಮೆಟ್ಟಿಸುವ ಸಾಮರ್ಥ್ಯ ತನಗಿದೆ ಎಂದು ರಷ್ಯಾದವರು ಹೇಳಿಕೆಯೊಂದನ್ನು ಹೊರಡಿಸಿರುವರು.

ಈ ವಾರದ ಭವಿಷ್ಯ

ಮೇಷ—ಸ್ವಪರಜನರಲ್ಲಿ ಪ್ರೀತಿ ವಿಶ್ವಾಸವಿದೆ. ಹಣದ ಬಿಕ್ಕಟ್ಟಿದೆ.

ವೃಷಭ—ಎಲ್ಲಾ ಭಾಗದಲ್ಲಿ ಅನುಕೂಲವಿರುವುದಾದರೂ ಸಾಂಪತ್ತಿಕ ಸ್ಥಿತಿ ಉತ್ತಮವಿಲ್ಲ.

ಮಿಥುನ—ಎಲ್ಲಾ ವಿಧದ ಅನುಕೂಲಗಳಿವೆ ಹಣ ಮಾನಸನ್ಮಾನ ಚೆನ್ನಾಗಿದೆ

ಕರ್ಕಾಟಕ—ನಿಮ್ಮ ಜಯಕೆಯು ಈಡೇರುವ ಕಾಲವಾಗಿದೆ, ಚಟುವಟಿಕೆಯಿಂದ ಕೆಲಸಮಾಡಿ.

ಸಿಂಹ—ಮಧ್ಯಮಫಲ, ಆದರೂ ಅನುಕೂಲಗಳೇ ಹೆಚ್ಚು.

ಕನ್ಯಾ—ಅನಾನುಕೂಲಗಳೇ ಹೆಚ್ಚು ಹಷಾರಿಂದ ವರ್ತಿಸಿ.

ತುಲಾ—ಚಿಂತೆಯೇ ಮೈಯೆಲ್ಲಾ ಆವರಿಸಿದೆ.

ವೃಶ್ಚಿಕ—ಜಾಗರೂಕತೆಯಿಂದ ವರ್ತಿಸಿ ಅಷ್ಟೇನು ಅನುಕೂಲಕಾಲವಲ್ಲ.

ಧನು—ನೀವೇನೂ ತಾಪತ್ರಯ ಪಡಬೇಕಾಗಿಲ್ಲ.

ಮಕರ—ಅಷ್ಟೇನು ಅನಾನುಕೂಲ ಕಾಲವಲ್ಲ.

ಕುಂಭ—ಚಿಂತೆ ಹೆಚ್ಚಿಸಲು ಒಂದಲ್ಲಿ ಒಂದು ವಿಷಯ ಸಿದ್ಧವಾಗಿದೆ

ಮೀನ—ಸ್ಥಿತಿಗತಿಗಳು ಉತ್ತಮಗೊಳ್ಳುವವು.

ಶ್ರೀ ಓಂ ಬ್ರಾಂಡ್ ಕೇಸರಿ

ಈ "ಓಂ" ಗುರ್ತಿನ ಕೇಸರಿಯು ಅತ್ಯಂತ ಪರಿಶುದ್ಧವಾದುದು. ಇದರಲ್ಲಿ ಯಾವ ಅಕ್ಷೇಪಕರವಾದ ಪದಾರ್ಥವೂ ಸೇರಿಲ್ಲ; ಮತ್ತು ಶಾಸ್ತ್ರೀಯವಾಗಿ ಪರಿಶುದ್ಧವಾದುದು. ದೇವಸ್ಥಾನಗಳಲ್ಲಿಯೂ ದೇವರ ಪೂಜೆಗೂ. ಔಷಧಿಗಳಿಗೂ ತಿಂಡಿ ಪದಾರ್ಥಗಳಿಗೂ ಸುಖ ಸಂತೋಷಕಾಲದಲ್ಲೂ ಉಪಯೋಗಿಸಲ್ಪಡಲು ಅರ್ಹವಾಗಿದೆ.

ಅತ್ಯಂತ ಪರಿಶುದ್ಧವಾದುದೆಂದು ಗ್ಯಾರಂಟಿ ಯೊಂದಿದೆ.

ವಲ್ಲಭದಾಸ್ ತೇಜಪಾಲ್

೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಜಿ. ಟಿ. ಮದರಾಸು

ಈ ವಾರದ ಕಥೆ—

ನಯಂಕತಾಪರಾಧ

(ಕಳೆದ ವಾರದ ಸಂಚಿಕೆಯಿಂದ ಮುಂದುವರಿದದ್ದು)

2 ನೇ ಅಧ್ಯಾಯ.

ನಾರಾಯಣಮೂರ್ತಿ ಇದ್ದ ಊರಿಗೆ ನಾರಾಯಣಪುರವೆಂದು ಹೆಸರು. ಭೀಮ ಸಂದ್ರವು ಇವನ ವಾಸಸಿದ್ದ ಊರು. ನಾರಾಯಣಪುರಕ್ಕೂ ಭೀಮ ಸಂದ್ರಕ್ಕೂ ರಾಜಮಾರ್ಗದಲ್ಲಿ ಪ್ರಯಾಣ ಮಾಡುವುದಕ್ಕೆ ಅನುಕೂಲವಾಗಿ ಗಾಡಿ ದೊರಿಯಲಿಲ್ಲ. ತೀರ್ಥ-ಮಾರ್ಗದಲ್ಲಿಯೇ ನಡೆದು ಸಾಯಂಕಾಲದನಳೆಗಾಗಿ ತಾವಿನ ಮನೆಯನ್ನು ಸೇರಿಕೊಳ್ಳುವದೆಂದು ನಿಶ್ಚಯಿಸಿ ಮಾಡಿಕೊಂಡನು.

ಫಾಲ್ಗುಣಮಾಸ ವೇಗವಾದ ಬಿಸಿಲುಜಳ ಸಮನಾಗಿ ಮಾಡಿದ ಮಾರ್ಗ ವಲ್ಲ, ಎಲ್ಲಿ ನೋಡಿದರೂ ಸರಜುಗಲ್ಲು. ಪಥ್ಯೆ ಮಧ್ಯೆ ಹಳ್ಳಕೊಳ್ಳಗಳು. ಮೂರ್ತಿಯೂ ಪಾದರಕ್ಷೆಯಿಲ್ಲದೆ ನಡೆದ ದನೇ ಇಲ್ಲ. ಈವತ್ತು ಸ್ವಲ್ಪ ದೂರ ನಡೆಯುವದರೊಳಗಾಗಿ ಪಾದರಕ್ಷೆಯನ್ನು ತೆಗೆಯದೆ ಕಲ್ಲು ಜರೆಯಲ್ಲಿ ನಡೆಯುವದಕ್ಕೆ ಸಾಧ್ಯವಿಲ್ಲ, ಹಸ್ತದಲ್ಲಿ ಧಾರಣೆ ಮಾಡಬೇಕಾಯಿತು

ಮೂರ್ತಿಯ ಮೈಯಲ್ಲಿ ಜೆವರು ಧಾರಾಕಾರ, ಕೋಟು ಪೇಟಾ ಪೆಂಟ್ಲೂನ್ ಷರ್ಟ್ ಮುಂತಾಗಿ ಎಲ್ಲವೂ ವದ್ದೆಮುದ್ದೆ. ಕಾಲಿಟ್ಟರೆ ಶಂಖಮುಖಿ ಕಲ್ಲಿನ ಹೊಡೆತ, ಅದೂ ಬಿಸಿಲಿನ ಕಾವಿನಿಂದ ಕಾವು ಕಾಲಿಡುವದು ಕಷ್ಟವಾಗಿದೆ, ಅದರೂ ಎಷ್ಟೇ ಕಷ್ಟದಿಂದ ನಡೆಯಲೇ ಬೇಕು. ಮೂರ್ತಿಯು ಒಹು ಕಷ್ಟದಿಂದ 4 ಮೈಲಿ ಗಳ ದಾರಿಯನ್ನು ಕಳೆಯುವದರೊಳಗಾಗಿ ಬಹಳ ಸುಸ್ತಾಗಿ ನಡುದಾರಿಯಲ್ಲಿ ವಿಶಾಲವಾಗಿ ನೆರಳು ಹರಪ್ರತ್ತಿರುವ ದೊಡ್ಡ ವಟವೃಕ್ಷವನ್ನು ಕಂಡು ವಿಶ್ರಮಿಸಿ ಕೊಳ್ಳತಕ್ಕ ಬಗ್ಗೆ ಅದರ ಅಡಿಯನ್ನು ಸೇರುತ್ತಲೇ ಅಯಾಸ ಪರಿಹಾರವಾಗಿ ಮೂರ್ತಿಗೆ ಗಾಢನಿದ್ದೆಯೇ ಪ್ರಾಪ್ತವಾಯಿತು.

ಮೂರ್ತಿಗೆ ಎಚ್ಚರವಾಗುವಾಗ್ಗೆ ಮಧ್ಯಾಹ್ನ 4-30 ಘಂಟೆ. ಕಿಸೆಯಲ್ಲಿ ಘಡಿಯಾರವನ್ನು ತೆಗೆದುನೋಡಿ ಘಾಬರಿಗೊಂಡು ಓಹೋ ಹೊತ್ತಾಯಿತಲ್ಲಾ ಸಂಜೆಯಾಗುವದಕ್ಕೆ ಇನ್ನು 1-30 ಘಂಟೆಕಾಲ ಉಳಿದಿರುತ್ತದೆ. ಅಷ್ಟರೊಳಗಾಗಿ ಎರಡೂವರೆ ಹರಿದಾರಿಗಳ ಮಾರ್ಗವನ್ನು ಕಾಲುನಡೆಯಿಂದ ದಾಟಿ ಮಾವನ ಮನೆ ಯನ್ನು ಸೇರಿಕೊಳ್ಳಬೇಕು. ಎಷ್ಟು ವೇಗವಾಗಿ ನಡೆದರೂ 2 ಘಂಟೆ ಕಾಲವಾದ ರೂ ಬೇಕಾಗುತ್ತದೆ. ಆದ್ದರಿಂದ ಈವತ್ತು ಮಾವನ ಮನೆಯನ್ನು ಸೇರತಕ್ಕದ್ದು ಮನುಷ್ಯ ಪ್ರಯತ್ನಕ್ಕೆ ಸಾಧ್ಯವಾಗತಕ್ಕದ್ದಲ್ಲ. ಏನುಮಾಡಲಿ ಹಿಂತಿರಿಗಿ ಮನೆ ಯನ್ನು ಸೇರಿ ಮತ್ತೆ ನಾಳೆ ಪ್ರಯತ್ನಮಾಡಲೆ, ನಮ್ಮ ತಾಯಿಯು ಸೊಸೆ ಒರು ತ್ತಾಳೆಂಬ ಸಂತೋಷದಿಂದ, ನಮ್ಮ ಮೂರ್ತಿಯು ಸೊಸೆಯನ್ನು ಕರತರುವ ಬಗ್ಗೆ ಪ್ರಯಾಣಮಾಡಿರುತ್ತಾನೆ, ನಾಳೆ ಕನ್ಯಲಿಯು ಬರುತ್ತಾಳೆ, ಇನ್ನು ನನಗೆ ಇಷ್ಟು ಕಷ್ಟವಿಲ್ಲ ಎಂದು ಮುಂತಾಗಿ ಅವರವರಲ್ಲಿ ಹೇಳಿಕೊಳ್ಳದಿರುವದಿಲ್ಲ. ಅವರಿವರು ತಮ್ಮ ಸಂತೋಷವನ್ನು ಹೊರಪಡಿಸದಿರುವದಿಲ್ಲ. ಇಂಥಾ ಸಂದರ್ಭದಲ್ಲಿ ನಾನೊಂ ಬ್ಬನೇ ಮನೆಗೆ ಹೋದವರುಂಟೆ, ಅದು ಸೂಕ್ಷ್ಮವಲ್ಲ. ಆದ್ದರಿಂದ ಮುಂದಕ್ಕೆ ಪ್ರಯಾಣಮಾಡಿ ಸರ್ವಪ್ರಯತ್ನದಿಂದ ಮಾವನ ಮನೆಯನ್ನು ಸೇರಿಕೊಳ್ಳುವದೇ ಉಚಿತ ಎಂದಂದುಕೊಂಡು ಎಲ್ಲಿಯೂ ನಿಲ್ಲದೆ ಅತಿವೇಗವಾಗಿ ದಾರಿ ನಡೆಯು ತ್ತಿದ್ದ. ಹೀಗೆ ಎಷ್ಟೇ ವೇಗವಾಗಿ ನಡೆದರೂ ಭೀಮಸಂದ್ರವು ಇನ್ನು 1 ಮೈಲಿ ಇರುವಷ್ಟರಲ್ಲಿಯೇ ಸೂರ್ಯದೇವನು ಅಸ್ತಾಚಲವನ್ನು ಸೇರಿ ಮರೆಯಾದನು. ಎಲ್ಲೆಲ್ಲಿಯೂ ಕತ್ತಲು ಆವರಿಸುತ್ತಾ ಬಂದಿತು.

ಇನ್ನು ಮೂರ್ತಿಗೆ ಕಣ್ಣು ಕಾಣುವದೇ! ಇದು ಮಂಜುಗುಡ್ಡ. ಇದು ಮಾರ್ಗ, ಇದುನುರಟಿ ಎಂದು ಮುಂತಾಗಿ ಅವದೂ ಕಾಣಲಿಲ್ಲ. ಮೂರ್ತಿಗೆ ಅವ್ವದೂ ಕಾಣದಿದ್ದರಿಂದ ಮೂರ್ತಿಯೂ ಅಲ್ಲಲ್ಲಿ ಎಡವಿ ಮುಗ್ಗರಿಸಿ ಬಹಳ ಅವಸ್ಥೆ ಬೀಳುತ್ತಾ ವುಂದೆ ನಡೆಯುವದಕ್ಕೆ ಸುತರಾಂ ಯತ್ನವಿಲ್ಲದೆ ಸವಿಾಪದ ಲ್ಲಿದ್ದ ಬಾಂದಿನ ಗುಡ್ಡೆಯನ್ನು ಸೇರಿ ಬೆಳಗಾಗುವವರೆಗೆ ಇಲ್ಲಿಯೇ ಕಾಲಕ್ಷೇಪ ಮಾಡಬೇಕಾಯಿತು. ಭೀಮಸಂದ್ರದ ಸವಿಾಪದಲಿ ಇಬ್ಬಗಳಕಾಟವೆಂಬ ವಿಷಯ ವಲ್ಲೆಲ್ಲಿಯೂ ಹರಡಿಕೊಂಡಿದೆ. ಇಂಥಾದ್ದರಲ್ಲಿ ಯಾವ ಅಪಾಯವೂ ಇಲ್ಲದೆ ಇಲ್ಲಿ ಕಾಲಕ್ಷೇಪ ಮಾಡುವದು ಸಾಧ್ಯವೆ? ಸಾಧ್ಯವಾಗಲಿ ಸಾಧ್ಯವಿಲ್ಲದೇ ಇರಲಿ ಹೇಗೂ ಈ ರಾತ್ರಿಯನ್ನು ಇಲ್ಲಿ ಕಳೆಯಲೇ ಬೇಕು. ನಾವು ಎಷ್ಟು ಜಾಗರೂಕರಾಗಿರುವಾಗ್ಯೂ ಮೈಮರೆತು ಮಲಗಿ ನಿದ್ದೆಮಾಡುತ್ತಿರುವ ವೇಳೆ ಯಲ್ಲಿ ಯಾವ ಅಪಾಯಕ್ಕೂ ಈಡಾಗದಂತೆ ನಮ್ಮ ಶರೀರವನ್ನು ನಾವು ರಕ್ಷಿ ಸಿಕೊಳ್ಳಬಲ್ಲವೇ !

ಆಗ್ಯೆ ದೇವರೇ ಕಾಪಾಡಬೇಕು, ದೇವರೇ ನೀನೇಗತಿ ನಮ್ಮ ಮನೆಯಲ್ಲಿ ತಾಯಿಯೆ ಯಲ್ಲಿ ನರಳುತ್ತಿರುವ ಹಣ್ಣು ಹಣ್ಣು ಮುದುಕಿ. ಈ ಕಣ್ಣು ಕಾಣದ ಕಾಡಿನಿಗೆ ಅರಣ್ಯವಾಸ ನಡುಕಾಡಿನಲ್ಲಿ ಇತರ ಸಹಾಯವಿಲ್ಲದೆ ಒಬ್ಬೊಂಟಿಗನಾಗಿ ಕಾಲ ಕ್ಷೇಪ ಮಾಡಬೇಕಾಗಿದೆ. ದೇವರೇ ಅಸದಳಾಧಿನನಾದ ನೀನೇ ಈ ವಿಪತ್ತನ್ನು ಪರಿಹರಿಸಬೇಕು ಎಂದು ಮುಂತಾಗಿ ಯೋಚಿಸುತ್ತಿರುವ ಸಮಯದಲ್ಲಿ ಆ ಮಾ ರ್ಗವಾಗಿ ದನಗಳು ನಡೆದು ಬರುತ್ತಿರುವ ಶಬ್ದವು ಮೂರ್ತಿಗೆ ಕೇಳಿಸಿತು.

(ಮುಂದುವರಿಯುವುದು.)

ಪ್ರಜಾಪ್ರತಿನಿಧಿ ಸಭೆ

(ನನ್ನ ಸ್ವಂತ ಸುದ್ದಿಗಾರರಿಂದ)

ಬೆಂಗಳೂರು ಜೂನ್ 4

ನಾಲ್ಕನೆ ದಿನದ ಪ್ರಜಾಪ್ರತಿನಿಧಿ ಸಭೆಯು ಯಥಾವತ್ತಾಗಿ 12 ಘಂಟೆಗೆ ರಾಜಮಂತ್ರಿ ಪ್ರವೀಣ ಅನಂತರಾಮನ್ ರವರ ಅಧ್ಯಕ್ಷತೆಯಲ್ಲಿ ಜರುಗಿತು. ಉಪ ಮಂತ್ರಿಗಳೂ ವೇದಿಕೆಯಮೇಲೆ ಮಂಡಿ ಸಿದ್ದರು.

1 ಘಂಟೆಕಾಲ ಪ್ರಶ್ನೋತ್ತರಗಳು ನಡೆದಿತು. ಅನಂತರ ಚರಿಕೆಗಳನ್ನು ತೆಗ ದುಕೊಂಡರು. ಇವು ಮುಖ್ಯವಾಗಿ ಲ್ಯಾಂಡು ರೆವಿನ್ಯೂ ಮತ್ತು ವಿದ್ಯಾಭ್ಯಾ ಸದ ವಿಚಾರವಾಗಿದ್ದವು. ಬಡ ಉಪಾ ಧ್ಯಾಯರ ಸಂಬಳ ಹೆಚ್ಚಿಸುವಿಕೆ, ಕೆಲವು ಪಾಠಶಾಲೆಗಳಲ್ಲಿ ಇರುವ ಗ್ರಾಜುಯೇ ಟ್ಸುಗಳನ್ನು ಖಾಯಂ ಮಾಡದೆಯೂ ಯಾವ ಗ್ರೇಡನ್ನು ದಯಪಾಲಿಸದೆಯೂ ಇದುವರಿಗೂ ಕೊಳಿಸುತ್ತಿರುವ ವಿಚಾರ ವನ್ನು ಚರ್ಚಿಸಿದರು. ಶ್ರೀ|| ಅಪ್ಪಾಜೀ ಗೌಡರು ವಿಚಾರಮಾಡುವದಾಗಿ ಹೇಳಿ ದರು ಆನಂತರ ನಡೆದ ಚರಿಕೆಗಳು ಕೇವಲ ಪಂಗಡದ ಕೋಮಿನ ಹಿತದೃಷ್ಟಿಯ ವಿಚಾರವಾಗಿದ್ದವು. ಮತ್ತು ಮುಸಲ ಮಾನರಿಗೆ ಶೇಕಡ 20 ರಷ್ಟು ಸರ್ಕಾ ರದ ಉದ್ಯೋಗವನ್ನು ಖಂಡಿತವಾಗಿ ಕಲ್ಪಿಸಿಕೊಡಬೇಕೆಂದು ಒತ್ತಿ ವಿ|| ಸಯದ್ ಅಬ್ದುಲ್ ರಹೀಮ್‌ರವರು ಭಾಷ ಣವನ್ನು ಮಾಡಿದರು. ಶ್ರೀ|| ಭೂಪಾಳಂ ಚಂದ್ರಶೇಖರಯ್ಯನವರು ಯುಕ್ತ ಭಾಷ ಣಮಾಡಿ ಇದನ್ನು ವಿರೋಧಿಸಿದರು. ಇದು ಸಕಾರಣದಿಂದ ಕೂಡಿತ್ತು. ಹೀಗೆ ಅನೇಕ ಬ್ರಾಹ್ಮಣೇತರರು ವಿರೋಧಿಸಿ ಮಾತಾಡಿದರು. ಇವರು ಬ್ರಾಹ್ಮಣೇ ತರರ ಪಂಗಡ ತ್ಯಜಿಸಿ ಈಗ ಬೇರೆಯಾಗಿ ದ್ದಾರೆ. ಶ್ರೀ|| ಬಳೇ ಸಿದ್ದಲಿಂಗಶೆಟ್ಟರು, ಶ್ರೀ|| ಅಬ್ಬಾಸ್‌ಖಾನ್, ಕಲಾಮು. ಬಸ ವಯ್ಯ, ಪರಮಶಿವಯ್ಯ ಮುಂತಾದವರು ಮುಖ್ಯಕಾರಣವೆಂದೂ ಇವರೂ ಇನ್ನೂ ಅನೇಕರು ತೀರ್ವ ಮತ್ತು ತೀಕ್ಷ್ಣ ಚರ್ಚೆ ನಡೆಯಿತು. ಸಭೆಯು 5-15 ಘಂ ಟೆಗೆ ನಾಳೆಗೆ ಮುಂದವರಿಯಿತು.

ಸಂಸ್ಥಾನದ ಸುದ್ದಿಗಳು

4 ನೇ ಬೆಳಿಗ್ಗೆ 9 ರಿಂದ 12 ರವರೆಗೆ ದಿವಾನರು ಇ-ಚಾರ್ಜ್‌ರು ತಮ್ಮ ಉಪ ಮಂತ್ರಿಗಳನ್ನು ಸಭೆ ಸೇರಿಸಿ ಅಠಾರ ಕಚೇರಿಯಲ್ಲಿ ಕಾರ್ಯಕ್ರಮದ ಸಭೆ ನಡಿಸಿದರು.

ಜುಲೈ ತಾ|| 19 ರಲ್ಲಿ ರಂಗಾಚಾ ರ್ಯರ ಪುರಭವನದಲ್ಲಿ ಶ್ರೀಮುಮ್ಮಡಿ ಕೃಷ್ಣರಾಜಒಡೆಯರ ಜಸ್ಮೋತ್ಸವ ದಿನಾ ಚರಣೆಯನ್ನು ಶ್ರೀ|| ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ನಡೆಯುವದೆಂದು ಶ್ರೀ|| ದೇವರಾಜೇ ಅರಸುರವರು ತಿಳಿಸುತ್ತಾರೆ.

ಶ್ರೀಮಾ ಮಹಾರಾಜರು ತಾ|| 10 ದಿನ ಮಧ್ಯಾಹ್ನ ಕುದುರೆ ಜೂಜಿನ ಜೊತೆಯಲ್ಲಿ ಯುದ್ಧ ಸೆಲಕರಣ ಪದಾ ರ್ಥಗಳ ವಿಜೃಂಭಣ ಆರಂಭೋತ್ಸವನ್ನು ನೆರವೇರಿಸುವರು.

10 ನೆ ತಾರೀಖು ಗುರುವಾರ ಮ ಧ್ಯಾಹ್ನ ಯುದ್ಧವಸ್ತು ಪ್ರದರ್ಶನದ ಪ್ರಾರಂಭೋತ್ಸವವಿರುವುದರಿಂದ, ಆ ದಿನದ ಬೆಳಿಗ್ಗೆ 8-30 ಕ್ಕೆ ಪ್ರಜಾಪ್ರತಿ ನಿಧಿ ಸಭೆಯು ಸೇರುವುದೆಂದು ದಿವಾನರು ತಿಳಿಸಿದರು.

ಸತ್ಯವಾದಿ ಪತ್ರಿಕೆಗೆ

ಚಂದಾದಾರರಾಗಿರಿ

ಸುಂದರ ನಗರ .... ಪ್ಯಾರಿಸ್ಸಿನಲ್ಲಿ

ನಾನೆಯ ಒಬ್ಬ ಧನಿಕನು ಪ್ಯಾರಿಸ್ಸಿನ ಒಂದು ಪತ್ರಿಕೆಯಲ್ಲಿ ಈ ರೀತಿಯ ಒಂದು ಜಾಹಿರಾತು ಪ್ರಕಿದ್ದನು. "1 ರೇಡಿಯೋ ಟ್ಯೂಬ (ಕ್ರಯ ರೂ. 5 ಕೊಟ್ಟರೆ ನೂರು ಕಿಲೋ (ಕಿಲೋಗೆ ರೂ 20) ಬೆಣ್ಣೆ ಕೊಡಲ್ಪ್ಪೇನೆ". ಈ ರೀತಿಯ ಹೆಚ್ಚಿನ ಬಹಮಾನವಿದ್ದರೂ ಅನೇಕ ದಿನಗಳವರೆಗೆ ರೇಡಿಯೋ ಟ್ಯೂಬನ್ನು ಒದಗಿಸಿಕೊಡಲಸಮರ್ಥರಾಗಿದ್ದರು. ಪ್ಯಾರಿಸ್ಸಿನಲ್ಲಿ ಒಂದು ಕಿಲೋ ಬೆಣ್ಣೆಗೆ ಕೂಪನ್ ಇದ್ದರೆ 40 ಫ್ರಾಂಕ್, ಬ್ಲಾಕ್ ಮಾರ್ಕೆಟ್ಟಿನಲ್ಲಿ 250 ಫ್ರಾಂಕು ಕ್ರಯವಿದೆ) ರೇಡಿಯೋ ಟ್ಯೂಬುಗಳ ಅಭಾವವಲ್ಲಿ ಅಷ್ಟು ಹೆಚ್ಚಾಗಿದೆ ಫ್ರಾನ್ಸಿನಲ್ಲಿ ನಡೆಯುತ್ತಿರುವದು 'ಬಾಟರ್' ಅಂದರೆ ದುಡ್ಡಿನ ಚಲಾವಣೆಯಿಲ್ಲದೆ ಸಾಮಾನನ್ನು ಕೊಟ್ಟು ಸಾಮಾನನ್ನು ಪಡೆಯುವದು, ಮತ್ತು ಬ್ಲಾಕ್ ಮಾರ್ಕೆಟ್ (ಕಳ್ಳತನದ ವ್ಯಾಪಾರ). ಜರ್ಮನಿಯಿಂದ ಬಂದಿರುವ 4 ಲಕ್ಷ ಜರ್ಮನ್ ನಾಗರೀಕರು ಫ್ರಾನ್ಸಿನಲ್ಲಿದ್ದಾರೆ. ಫ್ರಾನ್ಸಿನ ಆವರಣವು ಇವಾಗಲೇ ತುಂಬಿ ಹೋಗಿದೆ. ಖಾಸಗಿ ಮನೆಗಳೂ ತೋಟಗಳು ಇವೆಲ್ಲಾ ಇವರದೇ ಆಗಿದೆ. ಮಾರ್ಕೆಟ್ಟಿನಲ್ಲಿ ಜರ್ಮನರು ತಮಗೆ ಬೇಕಾದುದನ್ನು ಕೊಂಡುಕೊಂಡನಂತರ ಇತರರು ಅಲ್ಲಿ ವ್ಯಾಪಾರ ಮಾಡಬೇಕು. ಆಹಾರ ವಿತರಣೆಯು ಯೋಜನೆಯಿದ್ದರೂ ಕೂಳಿನ ತೊಂದರೆ ಹಲವರಿಗಿದೆ. ಫ್ರಾನ್ಸಿನ ಮಾರ್ಕೆಟ್ಟುಗಳಲ್ಲಿ ಜರ್ಮನರಿಗೆ ಮೊದಲನೇ ಸ್ಥಾನ. ನಂತರ ಪೋಲೀಸರು, ಸೈನಿಕರು, ನಂತರ ಶಾಲೆಗಳು ಆಸ್ಪತ್ರೆಗಳು, ರಕ್ಷಣಾ ವ್ಯಾಪಾರಿಗಳು ನಂತರ ಚಿಲ್ಲರೆ ಕೊಳ್ಳುವರು. ಚಿಲ್ಲರೆ ವ್ಯಾಪಾರ ಮಾಡುವವರು ಸಂತೆಗೆ ಹೋಗುವಾಗ ಅಲ್ಲಿ ಉಳಿದಿರುವುದು ಕೇವಲ ಹಿಪ್ಪೆ ಸಿಪ್ಪೆಗಳು. ಪ್ಯಾರಿಸ್ಸಿನಲ್ಲಿ ನಾಜಿಗಳು ಎರಡು ವರ್ಷಗಳಿಗಿಂತ ಹೆಚ್ಚು ಸಮಯದಿಂದಿದ್ದಾರೆ. ಅದರೂ ಪ್ಯಾರಿಸಿನ ಮೂಲ ನಿವಾಸಿಗಳಿಗೆ ಜರ್ಮನರೊಡನೆ ಸೌಹಾರ್ದತೆ ಇಲ್ಲ. ಪ್ಯಾರಿಸ್ಸಿನ ಜನರು ಹೇಳುವ ಮಾತಿದು "ನಿಜ, ಜರ್ಮನರ ಯುದ್ಧ ಕೌಶಲ್ಯಕ್ಕೆ ನಾವು ಶಿರಬಾಗುವವು. ಇದು ಬಿಟ್ಟು ಮಿಕ್ಕುಳಿದ ವಿಚಾರಗಳಲ್ಲಿ ಅವರು ಯಾವದರಲ್ಲಿ ಮುಂದಿದ್ದಾರೆ? ಅನೇಕ ನಮಗಿಂತಲೂ ಉತ್ತಮರಿಲ್ಲವೆಂದಲ್ಲ ಆದರೆ ಸಾಮಾನ್ಯವಾಗಿ ಜರ್ಮನರು ಉತ್ತಮ ವಾಹನಗಳಲ್ಲಿ ತಿರುಗಲಾಗದು. ಯಹೂದ್ಯರಿಗೆ ಸಹಾಯ ಮಾಡಿದವರನ್ನು ಶಿಕ್ಷಿಸಲಾಗುತ್ತದೆ. ಇದೇ ತಪ್ಪಿಗಾಗಿ 16 ವರ್ಷದ ಹುಡುಗಿಯೊಬ್ಬಳಿಗೆ 6 ತಿಂಗಳು ಕಠಿಣ ಸಜೆ!

ಪ್ಯಾರಿಸಿನಲ್ಲಿ ಧಾರಣೆ ನಿಯಂತ್ರಣದ ಖಾನೂನುಗಳು ಅಧಿಕಾರಿಗಳು ಇದ್ದರೂ ಬೆಲೆ ಏರುತ್ತಲೇ ಇದೆ. ದುಡ್ಡಿಲ್ಲದಿದ್ದರೂ ಸಿಕ್ಕಿದನ್ನು ಕೊಂಡುಕೊಳ್ಳುತ್ತಾರೆ. ಮಾರುವವರು ಕಡಿಮೆ ಕೊಳ್ಳುವವರು ಬಹಳ. ಮನೆಗಳು ಬೈಸಿಕಲ್‌ಗಳು ಪುಸ್ತಕ ಒಟ್ಟಿ ಪ್ರತಿಯೊಂದಕ್ಕೂ ವಿಪರೀತವಾದ ಬೆಲೆಯಿದೆ. ಜರ್ಮನರು ಇಲ್ಲಿ ಸರ್ವವನ್ನೂ ದೋಚಿತ್ತಿದ್ದಾರೆ ಆಹಾರ ಸಾಮಗ್ರಿಗಳೂ ಇತರ ಅವಶ್ಯಕಗಳೂ ದಿನೇ ದಿನೇ ಮಾಯವಾಗುತ್ತಿವೆ ಒದಲು ಎಲ್ಲೆಲ್ಲೂ ಕಾಗದದ ದುಡ್ಡು ಕಂಡು ಬರುತ್ತಿವೆ. ಪ್ರತಿ ಕಾರ್ಖಾನೆಯೂ ನಾಜಿಗಳಿಗಾಗಿ ಕೆಲಸ ಮಾಡುತ್ತಿದೆ. ಕಾರ್ಖಾನೆಗಳು ವಿಲಿಯಾಂತರವಾಗಿ ಹಣ ಸುಗ್ರಹಿಸುತ್ತಿವೆ. ತಮಗೆ ಕಚ್ಚಾಮಾಲುಗಳು ದೊರೆಯುವಾಗ ಕಳ್ಳತನದ ವ್ಯಾಪಾರದಿಂದ ಹೆಚ್ಚು ಬೆಲೆ ಕೊಟ್ಟು ಸಾಮಾನುಗಳನ್ನು ಪಡೆಯುತ್ತಾರೆ ಅವರಿಗೆ ಕೊಡುವ ರೀತಿ ನಿಯಂತ್ರಿಸಿದ ಬೆಲೆಗೇ ಇರುತ್ತದೆ. ಅದರೆ ನಿಜವಾಗಿಯೂ ಅವರು ಅದರ 15 ರಷ್ಟು ಹಣ ಕೊಟ್ಟಿರುತ್ತಾರೆ ತಮ್ಮಲ್ಲಿರುವ ಕಾಗದದ ಹಣದ ರಾಶಿಯನ್ನು ಯಾವ ರೀತಿಯಿಂದಲಾದರೂ ಉಪಯೋಗಕರವಾದ ವಸ್ತುಗಳಾಗಿ ಬದಲಾಯಿಸಲು ಕಾರ್ಖಾನೆಯ ಮಾಲೀಕರು ಪ್ರಯತ್ನಮಾಡುತ್ತಾರೆ. ಅದಕ್ಕಾಗಿ ಅವರು ಹೆಚ್ಚಿನ ಬೆಲೆ ಕೊಡಲು ಹಿಂಜರಿಯುವುದಿಲ್ಲ. ಇಲ್ಲದಿದ್ದರೆ ನೋಟುಗಳನ್ನಿಟ್ಟು ಮಾಡುವುದೇನು? ನಾಜಿಗಳಿಗಾಗಿ ಕೆಲಸ ಮಾಡದ ಕಾರ್ಖಾನೆಗಳು ಮುಚ್ಚಲ್ಪಟ್ಟಿವೆ ಅಥವಾ ಮುಚ್ಚುವಂಥಾ ಪರಿಸ್ಥಿತಿಯಲ್ಲಿವೆ ಅವುಗಳಿಗೆ ಕಚ್ಚಾ ಮಾಲುಗಳು ದೊರೆಯುವುದಿಲ್ಲ ಇಂಥಾ ಕಾರ್ಖಾನೆಗಳ ಮೇಲೆ ಸಂಪೂರ್ಣ ಅಧಿಕಾರವಿರಿಸಿ ನಾಜಿಗಳು ಅವನ್ನು ಮುಚ್ಚುತ್ತಾರೆ ಅನೇಕ ಕಡೆಗಳಲ್ಲಿ ಕಾರ್ಖಾನೆಗಳನ್ನು ಜರ್ಮನಿಗೆ ಸಾಗಿಸುವ ಪ್ರಯತ್ನ ಮಾಡಿರುವಂತೆ. ಕೂಪನ್ ಕಾರ್ಡುಗಳ ಕ್ರಯವು ಏರಿದೆ ಕಳೆದ ವರ್ಷ 20 ಫ್ರಾಂಕು ಬೆಲೆ ಇದ್ದ ಕಾರ್ಡಿಗೆ ಈ ವರ್ಷ 120 ರಿಂದ 150 ರವರೆಗೆ ಬೆಲೆ ಕೊಡಬೇಕು.

ಕೂಪನುಗಳಿದ್ದರೂ ಕೂಡ ನಿಮಗೆ ಬೇಕಾದ್ದೆಲ್ಲ ದೊರೆಯುವುದು ಕಷ್ಟ, ಈ ಕಾರಣದಿಂದ ಇಡೀ ದೇಶದಲ್ಲಿ ಹಾಹಾಕಾರವೆದ್ದಿದೆ ಸಮಸ್ಯಾರು ಜನರು ನಗರಗಳನ್ನು ಬಿಟ್ಟು ನಾಡನ್ನು ಸುತ್ತುತ್ತಾರೆ. ತಾಮ್ರ ರಬ್ಬರ್ ಗ್ಲಾಸ್ ಎಣ್ಣೆ ಸಾಬೂನು ಮುಯಣ ಅಲುಗೆಡ್ಡೆ ಮೊದಲಾದುವನ್ನು ತಂದು ಅವರು ಮಾರುತ್ತಾರೆ. ಈ ಸಾಮಾನುಗಳಿರುವಲ್ಲಿ ಹಣವು ಸರಿಯುತ್ತದೆ. ಆದರೆ ಆ ಹಣದ ಬೆಲೆ ಎಷ್ಟು? ಸೈಕಲ್‌ವಾಲರು ಗ್ರಾಮಗಳಿಗೆ ಸಾಮಾನುಗಳನ್ನು ನಗರಕ್ಕೆ ತಂದು ಮಾರುತ್ತಾರೆ. ರೈತರು ಎರಡು ಕಾರಣಗಳಿಗಾಗಿ ತಮ್ಮಲ್ಲಿಯ ಸಾಮಾನುಗಳನ್ನು ಸಂತೆಗೆ ಕೊಡಲು ಒಪ್ಪುವದಿಲ್ಲ. ಒಂದು ಗ್ರಾಮದಲ್ಲಿ ದೊರೆಯುವ ಅಲ್ಪ ಬೆಲೆ. ಮತ್ತೊಂದು ಮಾರಿಬಿಟ್ಟರೆ ತಮಗೆ ಮುಂದೆ ಆಹಾರ ಪದಾರ್ಥಗಳು ಬೇಕಾದಾಗ ದೊರೆಯದಿರುವ ಕಾರಣ. ವ್ಯವಸಾಯಕ್ಕೆ ಬೇಕಾದ ಸಾಹಿತ್ಯಗಳಿಲ್ಲ. ಜನರಿಗೆ ಒಟ್ಟೆ ಇಲ್ಲ ಎಂದಿಂತೆ ಕೃಷಿಕ ಗೊಬ್ಬರವನ್ನು ಉಪಯೋಗಿಸುವುದು ರೈತಸಿಗೆ ಕಷ್ಟವಾಗಿರುವ ಕಾರಣ ಉತ್ಪತ್ತಿ ಕಡಮೆಯಾಗಿ ಆಹಾರ ಸಮಸ್ಯೆ ದಿನದಿಂದ ದಿನಕ್ಕೆ ಕಠಿಣವಾಗುತ್ತಿದೆ ಇದರಿಂದ ರೈತರು ವ್ಯಾಪಾರಿಗಳಿಗೆ ತೊಡಗಿದ್ದಾರೆ. ಸಂಕಾರಂದನು ಬೆದರಿಸಿ ಹೆಚ್ಚಿನ ಅನ್ನವನ್ನು ಕೆಲಸಕ್ಕೆ ಪುಚ್ಚವ ಯತ್ನ ಮಾಡುತ್ತಿದ್ದಾರೆ.

ಈ ಸಮಸ್ಯೆಯು ಬಹು ಜಟಿಲವಾಗಿದೆ. ನಗರವು ವಿಸ್ತರವರೆಗೆ ರೈತನಿಗೆ ಒರೇ ಈ ಕಾಗದದ ಹಣವನ್ನು ಕೊಡುತ್ತದೋ ಅಷ್ಟರವರೆಗೆ ರೈತನು ಜವಾಬ್ದಾರಿಯಿಂದ ಕೆಲಸಮಾಡಲಾರ. ಬೆಳೆ ಬೆಳೆಸುವ ರೈತನಿಗೆ ಕಾಗದದ ದುಡ್ಡು! ಕಾಗದದ ದುಡ್ಡನ್ನು ಕೊಟ್ಟರೆ ರೈತನಿಗೆ ಬೇಕಾದುದಕ್ಕೆ ಅಭಾವ! (ಕೂ)

ಸಂಗೀತದ ಪ್ರತಿಭೆ

ಅಕ್ಬರನ ಆಳ್ವಿಕೆಯಲ್ಲಿ ತಸಶೇನಸೆಂಬ ಪ್ರಖ್ಯಾತ ಗಾಯಕನು ರಾಗಿಸಿ ತೋಡಿಯನ್ನು ಹಾಡಿ ಜಿಂಕೆಯು ತನ್ನಲ್ಲಿಗೆ ಓಡಿ ಬರುವಂತೆ ಮಾಡುತ್ತಿದ್ದನು. ಆ ರಾಗವನ್ನು ಮುಗಿಸುತ್ತಲೂ ಜಿಂಕೆಯು ಓಡಿ ಹೊಗುತ್ತಿತ್ತು.

ವೈದ್ಯನಾಥನೆಂಬ ಗಾಯಕನು ರಾಗ ಮಾಲ್ಕೋಶದ ಆಲಾಪನೆಯನ್ನು ಮಾಡಿ ತನ್ನ ಸಮೀಪದಲ್ಲಿಡಲ್ಪಡುವ ಕಲ್ಲನ್ನು ದ್ರವವಾಗುವಂತೆ ಮಾಡುತ್ತಿದ್ದನು, ಗಾನವನ್ನು ಮುಗಿಸುತ್ತಲೇ ದ್ರವವು ಪುನಃ ಘನವಾಗುತ್ತಿತ್ತು. ಇದಲ್ಲವೆ ಸಂಗೀತದ ಪ್ರತಿಭೆ.

ಇಟಲಿಯಲ್ಲಿ ಸಣ್ಣ ನಾಣ್ಯಗಳ ಅಭಾವದಿಂದ ಕಾಫೀಬೀಜವನ್ನು ನಾಣ್ಯಗಳಂತೆ ಪ್ರತಿಯಾಗಿ ಉಪಯೋಗಿಸುತ್ತಿರುವರು ಎಂದು ಯುದೂಸಾರ್ಥ ಟೈಮ್ಸ್ ಪತ್ರಿಕೆಯು ತಿಳಿಸುತ್ತದೆ.

ವರ್ತಮಾನ ಸಂಗ್ರಹ

—o—

ಯೂರೋಪಿನಲ್ಲಿರುವ ಸಣ್ಣ ಸಣ್ಣ ದೇಶಗಳೆಲ್ಲಾ ತಮ್ಮ ದೇಶವು ದೊಡ್ಡವು ಆಗಬೇಕೆಂದು ಕೋರುತ್ತಿದ್ದರೂ ಈ ಕಾರಣನೇ ಈಗಿನ ಯುದ್ಧಕ್ಕೆ ಕಾರಣವಾವರೂ, ಸ್ವೀಡನ್ನಿಗೆ ಮಾತ್ರ ಈ ದುರಾಶೆಯಿಲ್ಲ, ಅದು ತಟಸ್ಥವಾಗಿರಲು ಸಾಧ್ಯವಾಗಿರುವುದಕ್ಕೆ ಇದೇ ಕಾರಣವೆನ್ನಬಹುದು.

ಮಿ॥ ಸ್ಟಾಲಿನ್ನರಿಂದ ಉತ್ತರ ತೆಗೆದುಕೊಂಡುಬರುತ್ತಿರುವ ಮಿ। ಜೋಸೆಫ್ ಡೇವಿಸ್‌ರವರು ಈಗ ಅಲಾಸ್ಕಾಕ್ಕೆ ಬಂದಿರುತ್ತಾರೆ.

ಬೊಂಬಾಯಿನಲ್ಲಿ ಟ್ರಾಂ ಗಾಡಿಗಳಲ್ಲಿ ಹತ್ತವರೂ ಒಬ್ಬರಾಗುತ್ತಲಿ ಇನ್ನೊಬ್ಬರು (ಕ್ಯೂ ಪದ್ಧತಿ ಮೇರೆ) ಹತ್ತಬೇಕೆಂದು ಪೋಲೀಸ್ ಹುಕುಂ ಆಗಿದೆ.

ಮದರಾಸ್ ಪೂರ್ವ ತೀರದಲ್ಲಿ ಮಳೆಯು ಹಾವಳಿಯಾಗಿ ಬೆಳೆಯೆಲ್ಲಾ ಕೆಟ್ಟಿದೆ. ರೈತರಿಗೆ ಸರ್ಕಾರಿಗೆ ಸಹಾಯ ಮಾಡುತ್ತಿರುವರು.

ಮದರಾಸಿನಲ್ಲಿ ಶ್ರೀಮಾನ್ ಗಡ್ಡೆ ರಂಗಯ್ಯ ನಾಯಡುರವರನ್ನು ಸೆಂಟ್ರಲ್ ಅಸೆಂಬ್ಲಿಗೆ ಸದಸ್ಯರನ್ನಾಗಿ ಆರಿಸಲು ಉಮೇದುವಾರಿ ವಿಾಟಂಗನ್ನು ನಡೆಸಲು ಕಮ್ಯುನಿಸ್ಟ್ ಪಾರ್ಟಿಯವರಿಗೆ ಪೋಲೀಸ್ ಕಮಿಷನರು ಅನುಮತಿ ಕೊಡಲಿಲ್ಲ.

ವರ್ಜೀನಿಯಾ ಹಾಟ್‌ಸ್ಪ್ರಿಂಗ್ ಕೂಟವಲ್ಲಿ ಚೈನಾಕ್ಕೆ ಮಾಂಚೂರಿಯವನ್ನು ಕೊಡಬೇಕೆಂದು ತೀರ್ಮಾನವಾಯಿತು.

ಯುದ್ಧಾನಂತರ ಪ್ರಪಂಚದ ಜನಾಂಗಕ್ಕೆಲ್ಲಾ ಸ್ವಾತಂತ್ರ್ಯ ಕೊಡಬೇಕೆಂದು ಮಿ॥ ವೆಂಡೆಲ್ ವಿಲ್ಕಿಯವರು ಮತ್ತೆ ಒತ್ತಿ ಹೇಳಿರುವರು.

ಅಮೇರಿಕಾದಲ್ಲಿ ಪಾಲೋಮಿನೋನಲ್ಲಿರುವ ಇಂಡೋರ್ ಮಹಾರಾಜರು ತಮ್ಮ ಅಮೇರಿಕ ಹೆಂಡತಿಯನ್ನು ತ್ಯಜಿಸುವರೆಂದು ತಿಳಿಯಬಂದಿದೆ, ಇವರು ಮಾರ್ಗರೆಟ್ ಲಾಲೆರ್ ಬ್ಲಾನೆಕ್ ಯವರನ್ನು 1938 ಮುದುವೆಯಾದರು. ಆಗ ತಮ್ಮ ಹೆಸರನ್ನು ಮಿ॥ ಹೊಕರ್ ಎಂದು ಹೇಳಿಕೊಂಡರು.

ದೇಶಾಭಿಮಾನ ಸ್ವಾಭಿಮಾನ

ಇವುಗಳೆರಡರ ದೃಷ್ಟಿಯಿಂದಲೂ ಮೈಸೂರಿನವರಿಗೆ ಜೀವವಿಮೆ ಮಾಡಲು

ಮೈಸೂರು ಸರ್ಕಾರದ ಜೀವವಿಮೆ ಇಲಾಖೆಯ

ಪ್ರಜೆಗಳ ಶಾಖೆಯೇ ಅತ್ಯುತ್ತಮ ಸಂಸ್ಥೆ!

ವಿಮೆಯ ಮೊಬಲಗಿಗೆ ಸರ್ಕಾರದ ಹುಟ್ಟುವಳಿಯೇ ಆಧಾರ

ವಿಮೆಯಹಣವನ್ನು ಸ್ವಲ್ಪವೂ ಸಾವಕಾಶವಿಲ್ಲದೆ ಪಾವತಿಮಾಡಲಾಗುವದು

ವಿಮೆದಾರರಿಗೆ ಆಡಳಿತ ಸಮಯದಲ್ಲಿ ಪ್ರತಿನಿಧ್ಯವುಂಟು

ಸಾವಿರಕ್ಕೆ ಸಾಲಿಯಾನಾ ಇಪ್ಪತ್ತು ರೂ. ಗಳಂತೆ ಬೋನಸ್ ಹಂಚಿದೆ

ಹೆಚ್ಚು ವಿವರಗಳಿಗೆ ದಯವಿಟ್ಟು ಬರೆಯಿರಿ—

ಸೆಕ್ರೆಟರಿ,

ಮೈಸೂರು ಸರ್ಕಾರದ ಜೀವವಿಮೆ ಇಲಾಖೆ

ಬೆಂಗಳೂರು.

ಉತ್ಕೃಷ್ಟವಾದ ಹಿಂಗು

ಊಟವು ರುಚಿಕರವಾಗಿದ್ದು, ಸಂಪೂರ್ಣ ಆರೋಗ್ಯವೂ, ಸೌಖ್ಯವೂ ದೊರೆಯಲು

TG. ಮಾರ್ಕಿನ ಹಿಂಗನ್ನು ಉಪಯೋಗಿಸಿ.



ಇದನ್ನು ನೀವು ಒಂದು ಸಾರಿ ಉಪಯೋಗಿಸಿದರೆ, ಸಂತರ ಬೇರೆ ಯಾವುದನ್ನೂ ಉಪಯೋಗಿಸುವುದಿಲ್ಲ.

ಒಂದು, ಅರ್ಧ, ಕಾಲು ಪೌಂಡಿನ, ಒಂದು ಸೇರು, ಒಂದು ಪಲಮ್ ಪ್ಯಾಕಿನಲ್ಲಿ ಎಲ್ಲಾ ಪ್ರಮುಖ ವ್ಯಾಪಾರಸ್ಥಲಗಳಲ್ಲಿ ದೊರೆಯುತ್ತದೆ.

ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ನಮ್ಮ ಪರಿಮಳ ಆಡಿಕೆಪುಡಿಯು ಸುಪ್ರಸಿದ್ಧವಾದುದು.

ವಲ್ಲಭದಾಸ್ ತೇಜ್‌ಪಾಲ್

೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಮದರಾಸು.

ಮೈಸೂರು ವೈದ್ಯ ಪತ್ರಿಕೆ

ಉತ್ತಮ ಸಚಿತ್ರ ಕನ್ನಡ ತೆಲಗು

ಮಾಸಪತ್ರಿಕೆಗೆ

ಚಂದಾದಾರರಾಗಿರಿ

ಈಗಿಗ್ಗೆವಾರ್ಷಿಕ ಚಂದಾ ರೂ. ೩-೮-೦

ಬಿಡಿ ಪ್ರತಿ 4 ಆಣೆ.

ಹಿಕ್ಕಬಾಥಮ್ಸ್ ರೈಲ್ವೆ ಬುಕ್‌ಸ್ಟಾಲ್

ನಲ್ಲಯೂ ಪತ್ರಿಕೆಯು ತೆಗೆದಿಯಿತ್ತೆ.

ಕಾರ್ಯಾಲಯ :

ಶ್ರೀ ವಾಸವಾಂಬ ಭವನ

ಅಶೋಕ ರಸ್ತೆ — ಮೈಸೂರು

Edited, Printed & published by M. S. Krishna Rao, at the Satyavadi Press. Chamaraja Agrahar, Mysore.

ಅಕ್ಕರ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್ ಮೈಸೂರು

For good printing
Saraswati Printing Press
Lansdowne Buildings, Mysore

Lakshminar[illegible]hi Press
Srirampet, Mysore

Ranjit — — Satyabhama

ರಣಜಿತ್ ಟಾಕೀಸ್

ಮೈ. ವಿ. ರಾವ್ ಮತ್ತು ಪುಷ್ಪವಲ್ಲಿ

ಪಾತ್ರವಹಿಸಿರುವ

[ತೆಲಗು] ಸತ್ಯಭಾಮಾ [ತೆಲಗು]

ಶಕ್ತಿ ಸಾಧನೆಗೆ ಸುಲಭೋಪಾಯವು

ರಸಾಯನ ರಾಜ

ಕುಂಕುಮ

ಸೇವನೆ ಏಂಬುದು ನಿಮ್ಮ ಜ್ಞಾಪದಲ್ಲಿರಲಿ.

ಅನೇಕರಿಂದ ಪ್ರಶಂಸಿಸಲ್ಪಟ್ಟಿದೆ, ವಸ್ತುಪ್ರದರ್ಶನಗಳಲ್ಲಿ ಪ್ರಾಶಸ್ತ್ಯವನ್ನು ಪಡೆದಿದೆ

ಬೆಲೆ 1 ರೂಪಾಯಿ

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್ ತಯಾರಿಕೆ

ವಾಣಿ OR [Violinist]

ಎಂಬ ಕನ್ನಡ ಸಾಮಾಜಿಕ ಚಿತ್ರ

ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ

ಸಂಗೀತರತ್ನ ಟಿ. ಚೌಡಯ್ಯ, ಕಲ್ಚರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯ, ಗಾಯನಗಾಂಧರ್ವ ಚಂಪೆ ವೈದ್ಯನಾಥ ಭಾಗವತರ್ ಮೃದಂಗವಿದ್ವಾಂಸ ಮಣಿ ಕೋಕಿಲಕಂಠ ಬಳ್ಳಾರಿ ಲಲಿತ, ಚಂದ್ರಮ್ಮ, ರತ್ನ, ಪಂಡರೀಬಾಯಿ ಧನಭಾಗ್ಯಂ ಎ. ನಾರಾಯಣರಾವ್, ಕೆ. ಎಂ. ಮಹದೇವ್, ಮಾಸ್ಟರ್ ಬಿ. ವಿ. ಕೆ. ಮೂರ್ತಿ ಮುಂತಾದವರು ತಾರಾಗಣದಲ್ಲಿದ್ದಾರೆ.

ನಿರ್ದೇಶಕರು— ಜಿ. ಆರ್. ರಾಮಯ್ಯನವರು

ಸಂಗೀತ ನಿರ್ದೇಶಕರು— ಸಂಗೀತರತ್ನ ಟಿ. ಚೌಡಯ್ಯನವರು

ತಯಾರಿಕೆ— ಸಾಹುಕಾರ್ ಟಿ. ಎಸ್. ಶಿವಬಸವಸ್ವಾಮಿ

ಕಥಾ ಮತ್ತು ದಿಗ್ದರ್ಶಕರು— ಕೆ. ಹಿರಣ್ಣಯ್ಯ ಮತ್ತು ಎಂ. ಎಸ್. ಗೋಪಾಲ್

ಸ್ಟೂಡಿಯೊ—ಸೆಂಟ್ರಲ್ ಸ್ಟೂಡಿಯೋಸ್ ಲಿಮಿಟೆಡ್, ಕೊಯಮತ್ತೂರು